

# ಸೈಕಲ್ ಕ್ರಿಸ್ಮಸ್ ಟ್ರಿ

ಡಿಸೆಂಬರ್ ಮಾಸದಲ್ಲಿ ಜಗತ್ತಿನಾದ್ಯಂತ ಇರುವ ಕ್ರೈಸ್ತ ಬಾಂಧವರಲ್ಲಿ ಸಡಗರ ಸೆಲೆಯೊಡೆಯುತ್ತದೆ. ಈ ತಿಂಗಳ 25ರಂದು ಬರುವ ಕ್ರಿಸ್ಮಸ್ ಹಬ್ಬವನ್ನು ಆಚರಿಸಲು ಎಲ್ಲರೂ ಕಾತರದಿಂದ ಎದುರು ನೋಡುತ್ತಾರೆ. ಅಂದು ಕ್ರಿಸ್ಮಸ್ ಮರವನ್ನು ಬಣ್ಣ ಬಣ್ಣದ ವಿದ್ಯುತ್ ದೀಪ, ಬ್ಯಾಗಡೆ, ಪುಟ್ಟ ಗಂಟೆ, ರಿಬ್ಬನ್ ಮೊದಲಾದವುಗಳಿಂದ ಅಲಂಕರಿಸಿ ಸಂಭ್ರಮಿಸುತ್ತಾರೆ.

ಸಿಡ್ನಿಯ ದಿ ರಾಕ್ಸ್ ಎಂಬ ಸ್ಥಳದಲ್ಲಿ ಸಿಡ್ನಿ ಹಾರ್ಬರ್ ಫೋರ್ ಶೋರ್ ಅಥಾರಿಟಿಯವರು ಪುನರ್ಬಳಕೆ ಮಾಡಬಹುದಾದ ವಸ್ತುಗಳಿಂದ ಕ್ರಿಸ್ಮಸ್ ಮರವನ್ನು ನಿರ್ಮಿಸಿದ್ದಾರೆ. ಈ ಸಂಸ್ಥೆಯವರು 2008 ರಲ್ಲಿ ಕುರ್ಚಿಗಳನ್ನು ಬಳಸಿ, 2009 ರಲ್ಲಿ ಮರುಬಳಕೆ ಮಾಡಬಹುದಾದ ಬಾಟಲಿಗಳನ್ನು ಬಳಸಿಕೊಂಡು ಹಾಗೂ 2010ರಲ್ಲಿ ಸೈಕಲ್‌ಗಳಿಂದ ಕ್ರಿಸ್ಮಸ್ ಟ್ರೀ ನಿರ್ಮಿಸಿದ್ದರು. ಕೇವಲ ಸೈಕಲ್‌ಗಳು ಹಾಗೂ ಅದರ ಬಿಡಿ ಭಾಗಗಳನ್ನು ಮಾತ್ರ ಉಪಯೋಗಿಸಿ ಕೊಂಡು ನಿರ್ಮಾಣಗೊಂಡಿರುವ ಸೈಕಲ್ ಕ್ರಿಸ್ಮಸ್ ಮರ ಅತ್ಯಂತ ವಿಶಿಷ್ಟವಾಗಿದ್ದು ಪರಿಸರ ಸ್ನೇಹಿಗಳ ಪ್ರಶಂಸೆಗೆ ಪಾತ್ರವಾಯಿತು. ಸಿ ಎಮ್ ಆರ್ ರಿಸೈಕ್ಲಿಂಗ್ ಸಮೂಹದವರ ನೆರವಿನಿಂದ ಬರೋಬ್ಬರಿ 100 ಸೈಕಲ್‌ಗಳನ್ನು ಬಳಸಿಕೊಂಡು ಸುಮಾರು 7 ಮೀಟರ್ ಎತ್ತರದ ಈ ಕ್ರಿಸ್ಮಸ್ ಮರವನ್ನು ಡಿಸೈನ್ ಮಾಡಿ, ನಿರ್ಮಿಸಲು ಸುಮಾರು ಎರಡು ತಿಂಗಳುಗಳೇ ಬೇಕಾಯಿತಂತೆ. ಕ್ರಿಸ್ಮಸ್ ಸಮಯದಲ್ಲಿ ಸೈಕಲ್ ಕ್ರಿಸ್ಮಸ್ ಟ್ರಿ ವಿಭಿನ್ನವಾಗಿ ಗಮನ ಸೆಳೆಯುತ್ತದೆ.

■ ವಿದ್ಯಾ ವಿ. ಹಾಲಭಾವಿ

